| CLASS | SUBJECT |
| --- | --- |
| ROLL NO. | DATE |

## * ಡಾ|| ಇರಾವತಿ ಕರ್ವೆಯವರ ಬಂಧುತ್ವ/ ರಕ್ತ ಸಂಬಂಧ. :-

ಬಂಧುತ್ವ ವ್ಯವಸ್ಥೆಯು ಮೂಲಭೂತ ಸಾಮಾಜಿಕ ಸಂಸ್ಥೆಯನ್ನು ಪ್ರತಿನಿಧಿಸುತ್ತದೆ. ಸಂತಾನೋತ್ಪತ್ತಿಯಿಂದಾಗಲೀ ಆಯಾ ವ್ಯಕ್ತಿಗಳ ನಡುವಿನ ಸಂಬಂಧಗಳಿಗೆ ಎಡೆ ಮಾಡಿಕೊಡುವುದು ಪತಿ-ಪತ್ನಿಯರ ಸಂಬಂಧದಲ್ಲಿ ರಕ್ತ ಸಂಬಂಧ ಕಂಡು ಬರದೆ ಇದ್ದರೂ ಕಾನೂನಿನ ದೃಷ್ಟಿಯಲ್ಲಿ ಅಂತಹ ಸಂಬಂಧಕ್ಕೆ ಮನ್ನಣೆ ಇದೆ. ಹೀಗಾಗಿ ಸರಳ ಸಮುದಾಯದಲ್ಲಿ ಬಂಧುತ್ವ ಮತ್ತು ವಂಶಾವಳಿಯೆಂಬ ಪರಿಕಲ್ಪನೆಗಳು ಒಂದೇ ಅರ್ಥ ಕೊಡುತ್ತವೆ.

## * ಐವನ್ಸ್ - ರವರ ಪ್ರಕಾರ :-

ಸಾಮಾಜಿಕವಾಗಿ ಅಂಗೀಕರಿಸಲ್ಪಟ್ಟ ಶಾರೀರಿಕ ಸಂಬಂಧಗಳನ್ನು ಬಂಧುತ್ವವೆಂದು ಕರೆಯುತ್ತಾರೆ.

ಬಂಧುತ್ವ, ರಕ್ತ ಸಂಬಂಧ, ಕುಲ, ವಂಶ ಮುಂತಾದ ಪರಿಕಲ್ಪನೆಗಳು ರಕ್ತಸಂಬಂಧದ ಗುಂಪುಗಳು ಸೂಚಿಸುತ್ತವೆ. ಇಂಥಹ ಗುಂಪುಗಳು ಪ್ರಧಾನವಾಗಿ ಬುಡಕಟ್ಟು ಸಮುದಾಯದಲ್ಲಿ ಕಂಡು ಬರುತ್ತವೆ.

## * ರ್‍ಯಾಡ್‌ಕ್ಲಿಫ್ ಮತ್ತು ಬ್ರೌನ್ - ರವರ ಪ್ರಕಾರವಾಗಿ :-

ಸಾಮಾಜಿಕ ಆಚರಣೆಯ ನಿಯಂತ್ರಣಕ್ಕೊಳಪಟ್ಟು ಸಮುದಾಯದ ವ್ಯಕ್ತಿ-ವ್ಯಕ್ತಿಗಳ ನಡುವಿನ ದ್ವಿ-ಮುಖ ಸಂಬಂಧವೇ ಬಂಧುತ್ವವೆಂದು ಕರೆಯುವರು.

ಬಂಧುತ್ವವು ಬಂಧುಗಳ ಒಂದು ಸಮಾವೇಶವಾಗಿದ್ದು. ಮಾನವ ಸಮಾಜಗಳ ಅತಿ ನಿಕಟ ಮತ್ತು ಶಾಶ್ವತ ಸಂಬಂಧಗಳು ಬಿಂಬಿಸುತ್ತದೆ.

Scanned with CamScanner

## * ಬಂಧುತ್ವದ ರಚನೆ *

01) **ಸಂತಾನ ನಿಯಮ :-**

ಇದು ಬಹುತೇಕ ಬಂಧುತ್ವ ಪದಗಳು ಒಂದೇ ತಲೆಮಾರಿನ ಜನರಿಗೆ ಅನ್ವಯಿಸುತ್ತದೆ. ಅವುಗಳಿಗೆ ನಿಖರ ಅರ್ಥವ್ಯಾಪ್ತಿಯಿದೆ. ತಂದೆ- ತಾಯಿಗಳ ತಲೆಮಾರಿನ ಬಂಧುಗಳನ್ನು, ಚಿಕ್ಕಮ್ಮ- ಚಿಕ್ಕಪ್ಪ, ದೊಡ್ಡಪ್ಪ- ದೊಡ್ಡಮ್ಮ, ಹಾಗೆ ಮೃತ್ರಂಯು ನಂತರದ ತಲೆಮಾರುಗಳಲ್ಲಿ ಸೋದರರ ಪುತ್ರ - ಪುತ್ರಿ ಮುಂತಾದವುಗಳು.

02) **ಲಿಂಗಭೇದ :-**

ಸ್ತ್ರೀ- ಪುರುಷರೆಂಬ ಭೇದವನ್ನು ಗಣಿಸಿ ಬಂಧುತ್ವವನ್ನು ರಚಿಸಲಾಗಿದೆ. ಅತ್ತೆ - ಸೊಸೆ, ಸೋದರ ಮಾವ, ದೊಡ್ಡಪ್ಪ, ಅಣ್ಣ - ತಂಗಿ, ಗಂಡ - ಹೆಂಡತಿ ಮುಂತಾದವುಗಳು.

03) **ವಂಶಾವಳಿ :-**

ತಲೆಮಾರುಗಳ ಬಂಧುತ್ವದ ಮೂಲಕ ಗುರುತಿಸುವ ಕ್ರಮವಾಗಿದೆ. ವಂಶಾವಳಿಗೆ ಸೇರಿದ ಬಂಧುತ್ವ ಒಂದೇ ಕುಲಕ್ಕೆ ಸೇರಿದವರಾಗಿದ್ದು ಇಲ್ಲವೇ ಬೇರೆ-ಬೇರೆ ಕುಲಕ್ಕೆ ಸೇರಿದವರಾಗಿದ್ದು.

ಬಂಧುತ್ವ ಹುಟ್ಟಿನಿಂದ ನಿರ್ಧರಿಸಲ್ಪಡುತ್ತದೆ. ತಂದೆ - ತಾಯಿಗಳ ಸಂಬಂಧಗಳಿಂದ ಅದು ವೃದ್ಧಿಸುತ್ತದೆ. ಕುಟುಂಬವು ಸಂತಾನೋತ್ಪತ್ತಿ ಮಾಡುವುದು ಮಾತ್ರವಲ್ಲದೆ, ಬಂಧುತ್ವವನ್ನು ಗೊತ್ತುಪಡಿಸುತ್ತದೆ. ಇದು ಮೂಲತಃ ಶಾರೀರಿಕ ಸಂಬಂಧಗಳಿಂದ ಹುಟ್ಟಿದ ಬಂಧುತ್ವವನ್ನು ಸಾಮಾಜಿಕ ಸತ್ಯವೆಂದು ಪರಿಗಣಿಸಲಾಗಿದೆ.

ಸಾಮಾಜಿಕವಾಗಿ ಬಂಧುತ್ವವು ವಯಸ್ಸು, ಲಿಂಗ, ಪಾತ್ರ, ಮತ & ಜನಾಂಗ ಮುಂತಾದ ಅಂಶಗಳು

Sona Roopa

Scanned with CamScanner

ROLL NO. DATE

ಅವಲಂಬಿಸಿರುತ್ತದೆ. ಬಂಧುತ್ವವನ್ನು ಬೇರೆ-ಬೇರೆ ಸಮಾಜದಲ್ಲಿ ವಿವಿಧ ರೀತಿಯಲ್ಲಿ ವಿವರಿಸಲಾಗುತ್ತದೆ.

ಪ್ರಾರಂಭದಲ್ಲಿ ವ್ಯಕ್ತಿಯ ಶಾರೀರಿಕ ಸಂಬಂಧಗಳಿಂದ ಉತ್ಪತ್ತಿಯಾದ ಸಂಬಂಧ ಕ್ರಮೇಣವಾಗಿ ಸಾಮಾಜಿಕವಾಗಿ ಬಂಧುತ್ವದೊಡನೆ ಬೆರೆತು ಹಲವಾರು ಸಂಬಂಧಗಳಿಂದ ಬೆಳೆಯುತ್ತದೆ.

* ಬಂಧುತ್ವದ ಪ್ರಕಾರಗಳು *

01) ವೈವಾಹಿಕ ಬಂಧುತ್ವ :-

- ವಿವಾಹದ ಮೂಲಕ ಬಂಧನಕ್ಕೊಳಪಡುವದರಿಂದ ವೈವಾಹಿಕ ಬಂಧುತ್ವ ಏರ್ಪಡುವದು. ವಿವಾಹವಾಗುವ ವ್ಯಕ್ತಿ ಕೇವಲ ವಿವಾಹವಾಗುವ ತನಗೆ, ಮಾತ್ರ ಸಂಬಂಧಿಸಿರದೆ ಇತರೆ ಸಂಬಂಧದಲ್ಲೂ ಎಲ್ಲ ಸಂಬಂಧಿಕರ ಸಂಬಂಧ ಬೆಳೆಸಿಕೊಳ್ಳುತ್ತದೆ.

02) ರಕ್ತ ಸಂಬಂಧದ ಬಂಧುತ್ವ :-

- ಒಂದೇ ವಂಶದಲ್ಲಿಗೆ ಸೇರಿದ ಅನುವಂಶಿಕ ಕುಲ ಅಥವಾ ಗೋತ್ರಗಳಾದರೂ ಮೂಲ ವ್ಯಕ್ತಿಯ ಹುಟ್ಟಿನಿಂದ ಪಡೆಯುವ ರಕ್ತ
- ಸಂಬಂಧಗಳಿಂದ ಈ ಬಂಧುತ್ವ ಏರ್ಪಡುತ್ತದೆ. ರಕ್ತ ಸಂಬಂಧ ಕೇವಲ ಜೈವಿಕ ಆಧಾರದಿಂದ ಮಾತ್ರವಾಗಿರದೆ ಸಾಮಾಜಿಕ ಅಂಗೀಕೃತ ವ್ಯವಸ್ಥೆಯ ನಿರ್ಮಾಣವಾಗಿರುತ್ತದೆ.

ಇದು ಒಂದೇ ವಂಶದಲ್ಲಿ ಮತ್ತು ರಕ್ತ ಸಂಬಂಧಗಳು ಸಾಗಿಸುವುದು.

ಉದಾ : ಮಾತೃಗಳು, ತಂದೆ-ತಾಯಿ, ಚಿಕ್ಕಪ್ಪ-ಚಿಕ್ಕಮ್ಮ, ಅಣ್ಣ-ತಂಗಿ, ಮುಂತಾದವರು.

Sona Roopa
Scanned with CamScanner